AUGUST 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಡಿಜಿಟಲ್ ಸಾಕ್ಷರತೆ, ಸೈಬರ್ ಜಾಗೃತಿ ಅಭಿಯಾನ: 'ಸೆನ್' ಪೊಲೀಸ್ ಠಾಣೆಗಳ ಮೂಲಕ, ಜನ ಜಾಗೃತಿ.**
- **ರಾಜ್ಯದ ಅಡಕೆ ಬೆಳೆಗಾರರ ಸಮಸ್ಯೆ: ವಿಜ್ಞಾನಿಗಳ ತಂಡದೊಂದಿಗೆ, ಕೇಂದ್ರ ಕೃಷಿ ಖಾತೆ ಸಚಿವರ ಶೀಘ್ರ ಭೇಟಿ.**
- **ಉತ್ತರಕನ್ನಡ ಜಿಲ್ಲೆಯಲ್ಲಿ, 9 ಬಾಲ ಗರ್ಭಿಣಿಯರು ಪತ್ತೆ: 3 ತಿಂಗಳಿಗೊಮ್ಮೆ, ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿ ಸಭೆ, ಕಡ್ಡಾಯ.**
- **'ಏಕ್ ಪೇಢ್, ಮಾ ಕೇ ನಾಮ್': ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ, ಅತೀ ಹೆಚ್ಚು ಸಸಿಗಳನ್ನು ನೆಟ್ಟ ಶಾಲಾ ಮಕ್ಕಳು.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1-9-3-0 ಆರಂಭಿಸಿದೆ. ಆನ್ಲೈನ್ ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ದಾಖಲಿಸಲು, ಸಾರ್ವಜನಿಕರಿಗೆ ಅನುವು ಮಾಡಿದೆ. ರಾಜ್ಯ ಮಟ್ಟದ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ ಹಾಗೂ ಸೈಬರ್ ಜಾಗೃತಿ ಅಭಿಯಾನ, ಸೆನ್ ಪೊಲೀಸ್ ಠಾಣೆಗಳ ಮೂಲಕ, ಜಾರಿಯಲ್ಲಿದೆ.**

<><><>

**ಹಣ ಬಳಸಿ ಆಡುವ, ಎಲ್ಲ ರೀತಿಯ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವ, ಆನ್‌ಲೈನ್ ಗೇಮಿಂಗ್ ಉತ್ತೇಜನ ಮತ್ತು ನಿಯಂತ್ರಣ 2025 ವಿಧೇಯಕಕ್ಕೆ, ಲೋಕಸಭೆಯಲ್ಲಿ ಅಂಗೀಕಾರ ದೊರೆತಿದೆ. ಕಡ್ಡಾಯ ನಿಷೇಧ ನಿಯಮ ಉಲ್ಲಂಘಿಸಿದರೆ, 3 ವರ್ಷ ಜೈಲು ಶಿಕ್ಷೆ ಹಾಗೂ ಒಂದು ಕೋಟಿ ರೂಪಾಯಿ ದಂಡ ವಿಧಿಸುವ ಪ್ರಾವಧಾನ ಕಲ್ಪಿಸಲಾಗಿದೆ.**

<><><>

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ.

<><><>

ಗುಂಜನ್ ಆರ್ಯ ಧ್ವನಿ 54 ಸೆಕೆಂದುಗಳು.

<><><>

ರಾಜ್ಯದ ಅಡಕೆ ಬೆಳೆಗಾರರ ಸಮಸ್ಯೆಗಳನ್ನು ಅಭ್ಯಸಿಸಿ, ಪರಿಹಾರ ಕಂಡುಕೊಳ್ಳಲು, ಕೇಂದ್ರ ವಿಜ್ಞಾನಿಗಳ ತಂಡದೊಂದಿಗೆ ಭೇಟಿ ನೀಡುವುದಾಗಿ, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜಸಿಂಗ್ ಚೌಹ್ವಾಣ್, ಹೊಸ ದಿಲ್ಲಿಯಲ್ಲಿ ತಮ್ಮನ್ನು ಭೇಟಿ ಮಾಡಿದ, ರಾಜ್ಯದ ಸಂಸದರ ನಿಯೋಗಕ್ಕೆ ಭರವಸೆ ನೀಡಿದ್ದಾರೆ. ಕೇಂದ್ರದ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಕೇಂದ್ರ ಉಕ್ಕು ಮತ್ತು ಕೈಗಾರಿಕೆಗಳ ಖಾತೆ ಸಚಿವ, ಎಚ್.ಡಿ.ಕುಮಾರಸ್ವಾಮಿ ಹಾಗೂ, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ನಿಯೋಗದಲ್ಲಿದ್ದರು. ಬಳಿಕ ಮಾಹಿತಿ ನೀಡಿದ, ಸಚಿವ ಪ್ರಲ್ಹಾದ ಜೋಶಿ, ರಾಜ್ಯದ ಅಡಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು, ಕೇಂದ್ರ ಕೃಷಿ ಸಚಿವರಿಗೆ ಮಾಹಿತಿ ನೀಡಿ, ಹಿಂದೆ ಸಲ್ಲಿಸಲಾದ ವರದಿಗಳ ಆಧಾರದ ಮೇಲೆ, ತ್ವರಿತ ಕ್ರಮಕ್ಕೆ ಮನವಿ ಮಾಡಿದ್ದಾಗಿ ತಿಳಿಸಿದರು.

<><><>

ಕೋಲಾರ ಜಿಲ್ಲೆ, ಬಂಗಾರಪೇಟೆಯ ರೇಲ್ವೆ ನಿಲ್ದಾಣದಲ್ಲಿ, ಅಮೃತ ಭಾರತ ಯೋಜನೆಯಡಿ, 21 ಕೋಟಿ 79 ಲಕ್ಷ ರೂಪಾಯಿ ವೆಚ್ಚದಲ್ಲಿ, ಕೈಗೆತ್ತಿಕೊಳ್ಳಲಾದ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು, ವಿಭಾಗೀಯ ರೇಲ್ವೆ ಪ್ರಬಂಧಕ ಆಷುತೋಷ ಕುಮಾರ ಸಿಂಗ್ ಪರಿಶೀಲಿಸಿದರು. ಬಂಗಾರಪೇಟೆ ಕೋಲಾರ ಮಾರ್ಗದ, ರೇಲ್ವೆ ಟ್ರ್ಯಾಕ್ ಪರಿಶೀಲಿಸಿ, ಗೇಟ್ ಬಳಿಯ ತಾಂತ್ರಿಕ ಸಮಸ್ಯೆ ಮತ್ತು ಸುರಕ್ಷತಾ ವಿಧಾನಗಳ ಕುರಿತು, ಅಧಿಕಾರಿಗಳಿಂದ ಮಾಹಿತಿ ಪಡೆದರು.

<><><>

ಹಾಸನ ಜಿಲ್ಲೆ, ಹೊಳೆ ನರಸೀಪುರ ತಾಲೂಕು, ಹಳ್ಳಿಮೈಸೂರು, ಮಾದರಿ ಸೌರ ವಿದ್ಯುತ್, ಇಂಧನ ಸ್ವಾವಲಂಬಿ ಹೋಬಳಿಯಾಗಿ ರೂಪಿಸಲು, ಕೇಂದ್ರ ಸರ್ಕಾರ ಆಯ್ಕೆ ಮಾಡಿದೆ. ಪ್ರಧಾನಮಂತ್ರಿ ಮುಫ್ತ್ ಬಿಜಲಿ ಹಾಗೂ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಅಡಿ, ಗ್ರಾಮಸ್ಥರು ಸಬ್ಸಿಡಿ ರೂಪದಲ್ಲಿ ಸೌರ ವಿದ್ಯುತ್ ಪರಿಕರ ಅಳವಡಿಸಿಕೊಂಡು, ಫಲಾನುಭವಿಗಳಾಗಲು, ಡಿಸೆಂಬರ್ 31ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

<><><>

ಉಡುಪಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ, ನೂತನವಾಗಿ ನಿರ್ಮಿಸಿದ, ಅಕ್ಕ ಕೆಫೆ ಕರ್ಣಧಾರತ್ವವನ್ನು, ಕಲ್ಯಾಣಪುರ ಗ್ರಾಮ ಪಂಚಾಯಿತಿಯ, ಬ್ರಹ್ಮಶ್ರೀ ಸಂಜೀವಿನಿ ಸ್ವ ಸಹಾಯ ಸಂಘದ ಮಹಿಳೆಯರು ವಹಿಸಿಕೊಂಡಿದ್ದಾರೆ. ಕರ್ನಾಟಕ ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅನುಷ್ಠಾನಗೊಳಿಸಿದ, ಅಕ್ಕ ಕೆಫೆ ಯೋಜನೆ, ದುಡಿಯುವ ಮಹಿಳೆಯರ ಕೈಗಳಿಗೆ ಕೆಲಸ, ಕಡಿಮೆ ದರದಲ್ಲಿ ಶುಚಿ, ರುಚಿಯಾದ ಊಟ, ಉಪಾಹಾರ ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, 9 ಬಾಲ ಗರ್ಭಿಣಿ ಪ್ರಕರಣಗಳು ಪತ್ತೆಯಾದ ಹಿನ್ನೆಲೆ, ತಹಸೀಲ್ದಾರ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಮೂರು ತಿಂಗಳಿಗೊಮ್ಮೆ, ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿ ಸಭೆಯನ್ನು ಕಡ್ಡಾಯವಾಗಿ ನಡೆಸುವಂತೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ತಿಪ್ಪೇಸ್ವಾಮಿ ಸೂಚಿಸಿದ್ದಾರೆ.

ಶಿರಸಿಯಲ್ಲಿ ಆಯೋಜಿಸಿದ್ದ, ಮಕ್ಕಳ ರಕ್ಷಣಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಶಿರಸಿ ತಾಲೂಕಿನಲ್ಲಿ 288 ವಿಶೇಷಚೇತನ ಮಕ್ಕಳಿದ್ದಾರೆ. ಅವರ ಯೋಗಕ್ಷೇಮ ಖಾತ್ರಿ ಪಡಿಸಬೇಕು. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಅವುಗಳ ನಿಯಂತ್ರಣ ಮತ್ತು ತಡೆ ಖಾತ್ರಿ ಪಡಿಸಲು, ಸಂಬಂಧಿತ ಎಲ್ಲ ಇಲಾಖೆಗಳ ಅಧಿಕಾರಿಗಳು, ಪರಸ್ಪರ ಸಹಕಾರ ಮತ್ತು ಸಮನ್ವಯದಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

<><><>

ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ, 'ಏಕ್ ಪೇಡ್ ಮಾ ಕೇ ನಾಮ್', 2ನೇ ಆವೃತ್ತಿಯ ಅಭಿಯಾನ ಆರಂಭಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ ಈ ಯೋಜನೆಗೆ, ಸರ್ಕಾರಿ ಶಾಲೆ ಮಕ್ಕಳಿಂದ ಉತ್ತಮ ಸ್ಪಂದನೆ ದೊರೆತಿದೆ. ರಾಜ್ಯದ 24 ಸಾವಿರದ 4 ನೂರಾ 77 ಶಾಲೆಗಳಲ್ಲಿ, 3 ಲಕ್ಷದ 64 ಸಾವಿರದ 401 ಸಸಿಗಳನ್ನು ನೆಟ್ಟು, ಮಕ್ಕಳು ಪೋಷಿಸುತ್ತಿದ್ದಾರೆ.

<><><>

ಬೆಳಗಾವಿ ವಿಭಾಗದ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ, ಸಾವಿರದ 665 ಶಾಲೆಗಳಲ್ಲಿ, ರಾಜ್ಯದಲ್ಲಿಯೇ ಅತಿ ಹೆಚ್ಚು, 55 ಸಾವಿರದ 790 ಸಸಿಗಳನ್ನು ಶಾಲಾ ಮಕ್ಕಳು ನೆಟ್ಟಿದ್ದಾರೆ. ಧಾರವಾಡ ಜಿಲ್ಲೆಯ 544 ಶಾಲೆಗಳಲ್ಲಿ, 6 ಸಾವಿರದ 951 ಸಸಿಗಳನ್ನು ನೆಡಲಾಗಿದೆ.

<><><>

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದ, ಸಹಾಯಕ ಯೋಜನಾ ಸಮನ್ವಯಾಧಿಕಾರಿ, ರೇಣುಕಾ ಅಮಲಝರಿ.

<><><>

ರೇಣುಕಾ ಅಮಲಝರಿ ಧ್ವನಿ 50 ಸೆಕೆಂದುಗಳು.

<><><>

‘ಬಾಹ್ಯಾಕ್ಯಾಶ ಕ್ಷೇತ್ರದಲ್ಲಿ, ಭಾರತದ ಸಾಂಸ್ಕೃತಿಯ ಪರಂಪರೆ ಮತ್ತು ಆಧುನಿಕ ಸಾಧನೆಗಳು’ ಎಂಬ ಧ್ಯೇಯದೊಂದಿಗೆ,ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯಗಳ ಮಂಡಳಿ, ಇಂದು, ದೇಶಾದ್ಯಂತ 25 ಕಾರ್ಯಕ್ರಮಗಳನ್ನು ಆಯೋಜಿಸಿದೆ. ಚಂದ್ರಯಾನ 3 ಮಿಷನ್ ಯಶಸ್ವಿ ಉಡಾವಣೆ, ವಿಕ್ರಮ ಲ್ಯಾಂಡರ್‌ನ ಮೃದು ಇಳಿಯುವಿಕೆ ಮತ್ತು ಆಗಸ್ಟ್ 23 ರಂದು ಚಂದ್ರನ ಮೇಲೆ ಪ್ರಜ್ಞಾನ್ ರೋವರ್ ನಿಯೋಜನೆಯ ಸ್ಮರಣಾರ್ಥ, ನಾಳೆ ಆಗಸ್ಟ್ 23ನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಘೋಷಿಸಲಾಗಿದೆ.

<><><>

ಗುಲಬರ್ಗಾ ಜಿಲ್ಲಾ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಶಾಲಾ ವಿದ್ಯಾರ್ಥಿಗಳಿಗಾಗಿ, ಇಸ್ರೋ ರಾಷ್ಟ್ರೀಯ ದೂರ ಸಂವೇದಿ ಕೇಂದ್ರದ ವಿಜ್ಞಾನಿ ಟಿ.ಎಸ್. ಪ್ರಸಾದ, ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು, ಕಲಬುರಗಿ ಜಿಲ್ಲಾ ವಿಜ್ಞಾನ ಅಧಿಕಾರಿ ಕೆ.ಎಂ. ಸುನೀಲ ತಿಳಿಸಿದ್ದಾರೆ.

<><><>

ಕರ್ನಾಟಕದ ನೌಕಾ ನೆಲೆಗಳ, ಫ್ಲ್ಯಾಗ್ ಆಫಿಸರ್ ಇನ್ ಕಮಾಂಡ್ ಆಗಿ, ರಿಯರ್ ಅಡ್ಮಿರಲ್, ವಿಕ್ರಮ್ ಮೆನನ್ ಅಧಿಕಾರ ವಹಿಸಿಕೊಂಡಿದ್ದಾರೆ. ಖಡಕ್‌ವಾಸ್ಲಾದ ಪ್ರತಿಷ್ಠಿತ ರಾಷ್ಟ್ರೀಯ ರಕ್ಷಣಾ ಅಕಾದೆಮಿ ಮತ್ತು ನೌಕಾ ಮಹಾವಿದ್ಯಾಲಯದ, ಹಿರಿಯ ವಿದ್ಯಾರ್ಥಿಯಾಗಿದ್ದು, ನಿಪುಣ ಫೈಟರ್ ಪೈಲಟ್ ಹಾಗೂ ಸೀ ಹ್ಯಾರಿಯರ್ ವಿಮಾನ ಚಾಲನೆಯ ಅರ್ಹತೆ ಪಡೆದಿದ್ದಾರೆ. 2 ಸಾವಿರ ಗಂಟೆಗಳಿಗೂ ಹೆಚ್ಚು ಕಾಲ ಹಾರಾಟ ನಡೆಸಿದ ಅನುಭವ ಹೊಂದಿದ್ದಾರೆ. ಕಾರವಾರ ನೌಕಾ ನೆಲೆ ಸೇರಿದಂತೆ, ಕರ್ನಾಟಕದ ಎಲ್ಲ ನೌಕಾ ಘಟಕಗಳು ಮತ್ತು ಕಾರ್ಯಾಚರಣೆಗಳು, ಆಡಳಿತ ಮತ್ತು ಭದ್ರತೆಯ ಹೊಣೆ ವಿಕ್ರಮ್ ಮೆನನ್ ಹೊತ್ತಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಡಿಜಿಟಲ್ ಸಾಕ್ಷರತೆ, ಸೈಬರ್ ಜಾಗೃತಿ ಅಭಿಯಾನ: ‘ಸೆನ್’ ಪೊಲೀಸ್ ಠಾಣೆಗಳ ಮೂಲಕ, ಜನ ಜಾಗೃತಿ.
- ರಾಜ್ಯದ ಅಡಕೆ ಬೆಳೆಗಾರರ ಸಮಸ್ಯೆ: ವಿಜ್ಞಾನಿಗಳ ತಂಡದೊಂದಿಗೆ, ಕೇಂದ್ರ ಕೃಷಿ ಖಾತೆ ಸಚಿವರ ಶೀಘ್ರ ಭೇಟಿ.
- ಉತ್ತರಕನ್ನಡ ಜಿಲ್ಲೆಯಲ್ಲಿ, 9 ಬಾಲ ಗರ್ಭಿಣಿಯರು ಪತ್ತೆ; 3 ತಿಂಗಳಿಗೊಮ್ಮೆ, ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿ ಸಭೆ, ಕಡ್ಡಾಯ.
- ‘ಏಕ್ ಪೇಢ್, ಮಾ ಕೇ ನಾಮ್’: ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ, ಅತೀ ಹೆಚ್ಚು ಸಸಿಗಳನ್ನು ನೆಟ್ಟ ಶಾಲಾ ಮಕ್ಕಳು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>